GULBARGA UNIVERSITY
"Jnana Ganga", GULBARGA - 585 106, Karnataka, India.
☎ 08472-263202
Fax. 08472-263206
E-Mail: root @guluni.kar.nic.in
Grams: UNIGUL

ಕ್ರ.ಸಂ.ಗುವಿಗು/ವಿಮವಿ/2013-14/ ದಿನಾಂಕ: 12.09.2013

## ಸುತ್ತೋಲೆ

ವಿಷಯ: ಪ್ರಥಮ ಸೆಮಿಸ್ಟರ್ ಪದವಿ ಕೋರ್ಸಿನ ಪ್ರವೇಶಕ್ಕೆ ಅಂತಿಮ ದಿನಾಂಕ ವಿಸ್ತರಿಸಿದ ಬಗ್ಗೆ.

ಉಲ್ಲೇಖ: 1) ಸುತ್ತೋಲೆ ಸಂಖ್ಯೆ. ಗುವಿಗು/ವಿಮವಿ/ಪ್ರವೇಶ/2013-14/609 ದಿನಾಂಕ: 03.08.2013.

2) ಕುಲಪತಿಗಳ ಅನುಮೋದನೆ ದಿನಾಂಕ: 12.09.2013.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿರುವಂತೆ, ಉಲ್ಲೇಖಿತ ಸುತ್ತೋಲೆಯನ್ವಯ ದಿನಾಂಕ 22.08.2013 ಒಳಗಾಗಿ ರೂ. 1,500/- ದಂಡ ಶುಲ್ಕದೊಂದಿಗೆ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆಯಲು ಸೂಚಿಸಲಾಗಿತ್ತು.

ಮುಂದುವರೆದು, ಹಲವಾರು ವಿದ್ಯಾರ್ಥಿಗಳು ಪ್ರವೇಶ ನೀಡುವಂತೆ ಕೋರಿದ ಅರ್ಜಿಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಂಶುಪಾಲರು ಸೂಕ್ತ ಕ್ರಮಕ್ಕಾಗಿ ಈ ಕಾರ್ಯಾಲಯಕ್ಕೆ ಕಳುಹಿಸಿರುವದನ್ನು ಕೂಲಂಕುಶವಾಗಿ ಪರಿಶೀಲಿಸಿ, ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ರೂ. 2,000/- ವಿಶೇಷ ದಂಡ ಶುಲ್ಕದೊಂದಿಗೆ, ಪ್ರಥಮ ಸೆಮಿಸ್ಟರ್ ಕೋರ್ಸಿಗೆ ಪ್ರವೇಶ ಪಡೆಯುವ ದಿನಾಂಕ 18.09.2013 ರ ವರೆಗೆ ಈ ಮೂಲಕ ವಿಸ್ತರಿಸಲಾಗಿದೆ.

ವಿದ್ಯಾರ್ಥಿಗಳಿಗೆ ಹಾಜರಾತಿಯ ಕೊರತೆಯಾಗದಂತೆ, ರಜಾ ದಿನಗಳಲ್ಲಿ ವಿಶೇಷ ತರಗತಿಗಳನ್ನು ಏರ್ಪಡಿಸಲು ಈ ಮೂಲಕ ತಿಳಿಸಲಾಗಿದೆ. ವಿಶ್ವವಿದ್ಯಾಲಯದ ಕ್ರಮನಿಯಮಾವಳಿಗಳ ಪ್ರಕಾರ, ಕನಿಷ್ಟ ಹಾಜರಾತಿ ಹೊಂದಿರಬೇಕೆಂಬ ಷರತ್ತಿನೊಂದಿಗೆ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪತ್ರಪಡೆದು, ಪ್ರವೇಶ ನೀಡಲು ಸೂಚಿಸಲಾಗಿದೆ. ಮುಂದುವರೆದು, ನಿಯಮಾನುಸಾರ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ ಯಾವುದೆ ಸಂದರ್ಭದಲ್ಲಿ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದಿಲ್ಲ.

12/9/13

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಗೆ,
ಎಲ್ಲಾ ಮಾಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ
ಪ್ರತಿ:
1 ಕುಲಪತಿಗಳ ಆಪ್ತ ಕಾರ್ಯದರ್ಶಿ/ ಕುಲಸಚಿವರ ಆಪ್ತ ಸಹಾಯಕ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ